ಆರೋಪ – 6 :-

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 29(ಜಿ) ರ ಪ್ರಕಾರ ಶ್ರೀ ಆರ್.ವಿ.ಮಧುಸೂಧನ್, ವ್ಯವಸ್ಥಾಪಕ ನಿರ್ದೇಶಕರು, ಘಟಪ್ರಭ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಗೋಕಾಕ್, ಬೆಳಗಾಂ ಜಿಲ್ಲೆ ರವರು ಕರ್ತವ್ಯಗಳನ್ನು ನಿರ್ವಹಣೆ ಮಾಡಿರುವುದಿಲ್ಲ ಹಾಗೂ ವರದಿ ಮಾಡಿರುವ ಲೋಪದೋಷಗಳಿಗೆ ನೇರವಾಗಿ ಹೊಣೆಗಾರರಾಗಿರುತ್ತಾರೆ. ಮುಖ್ಯವಾಗಿ ಅಂದಾಜು ರೂ.5055.50 ಲಕ್ಷದ ಮೊತ್ತಕ್ಕೆ ವಿವಿಧ ಬ್ಯಾಂಕುಗಳಲ್ಲಿ ಅಡಮಾನ ಮಾಡಿದ ಸಕ್ಕರೆ ದಾಸ್ತಾನು ಇರುವ ಬಗ್ಗೆ ತೀವ್ರ ಸಂಶಯ ಉಂಟಾಗಿದೆ.

ಕರ್ನಾಟಕ ವಿಧಾನ ಸಭೆ

409

ಶ್ರೀ ಕರಡಿ ಸಂಗಣ್ಣ ಅಮರಪ್ಪ

ಅ) ಬೆಳಗಾಂ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿಯಮಿತದವರು ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಸಹಕಾರಿ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳಿಗೆ ನೀಡಿರುವ ಸಾಲವೆಷ್ಟು? (ಪೂರ್ಣ ಮಾಹಿತಿ ನೀಡುವುದು) ಹಾಗೂ ಬ್ಯಾಂಕಿನ ಪದಾಧಿಕಾರಿಗಳ ಸಂಬಂಧಿಕರು ಆಡಳಿತ ಮಂಡಳಿಯಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಸಾಲ ಕೊಡಲಾಗಿದೆಯೇ? ಹಾಗಿದ್ದಲ್ಲಿ ಸಾಲ ಮಂಜುರಾತಿ ನಿಯಮಗಳನ್ನು ಪಾಲಿಸಲಾಗಿದೆಯೇ?

ಕಳೆದ ಮೂರು ವರ್ಷ ಅವಧಿಯಲ್ಲಿ ಈ ಕೆಳಗಿನ ಸಹಕಾರಿ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳಿಗೆ ಬ್ಯಾಂಕು ನೀಡಿರುವ ಸಾಲದ ವಿವರ:-

ಕ್ರ. ಸಂ.	ಕಾರ್ಖಾನೆ ಹೆಸರು	ಉದ್ದೇಶ	2005–06 (ರೂ.ಲಕ್ಷ ಗಳಲ್ಲಿ)	2006–07 (ರೂ.ಲಕ್ಷ ಗಳಲ್ಲಿ)	2007–08 (ರೂ.ಲಕ್ಷ ಗಳಲ್ಲಿ)
1	ಶ್ರೀ ಸೋಮೇಶ್ವರ ಸ.ಸ.ಕಾರ್ಖಾನೆ ನಿ, ಶಿದ್ದ ಸಮುದ್ರ	1.ದುಡಿಯುವ ಬಂಡವಾಳ 2.ಕ್ಲೀನ್ ಸಿಸಿ 3.ಅವಧಿ ಸಾಲ	– – 0.68	2000.00 115.00 300.00	3500.00 – –
2	ಶ್ರೀ ಹಿರಣ್ಯಕೇಶಿ ಸ.ಸ. ಕಾರ್ಖಾನೆ ನಿ, ಸಂಕೇಶ್ವರ	1.ದುಡಿಯುವ ಬಂಡವಾಳ 2.ಅವಧಿ	2600.00 –	2683.00 615.70	2752.00 –

		ಸಾಲ 3.ವಿದ್ಯುತ್ ಘಟಕ ಸ್ಥಾವರ	–	–	1614.64
3	ಶ್ರೀ ಕೃಷ್ಣಾ ಸ.ಸ.ಕಾರ್ಖಾನೆ ನಿ, ಅಥಣಿ	1.ದುಡಿಯುವ ಬಂಡವಾಳ 2.ಗೋಡೌನ್ ಸಾಲ	1600.00 –	3800.00 –	4000.00 77.00
4	ಘಟಪ್ರಭಾ ಸ.ಸ.ಕಾರ್ಖಾನೆ ನಿ, ಗೋಕಾಕ್	1.ದುಡಿಯುವ ಬಂಡವಾಳ	2187.50	2187.50	ಸುಸ್ತಿಯಾಗಿ ಮುಂದು ವರೆದಿದೆ.
5	ದೂಧಗಂಗಾ ಸ.ಸ. ಕಾರ್ಖಾನೆ ನಿ, ಚಿಕ್ಕೋಡಿ	ಅಡವು ಸಾಲ	400.00	–	–
6	ವಿಶ್ವನಾಥ ಶುಗರ್ಸ್ ನಿ, ಬೆಲ್ಲದ ಬಾಗೇವಾಡಿ	ಅವಧಿ ಸಾಲ	400.00	–	–
7	ಶ್ರೀ ನಂದಿ ಸ.ಸ. ಕಾರ್ಖಾನೆ ನಿ, ಚಿಕ್ಕಗಲಗಲಿ	1.ದುಡಿಯುವ ಬಂಡವಾಳ	–	–	1000.00

ಈ ಕಾರ್ಖಾನೆಗಳ ಆಡಳಿತ ಮಂಡಳಿಯಲ್ಲಿ ಬ್ಯಾಂಕಿನ ಪದಾಧಿಕಾರಿಗಳ ಸಂಬಂಧಿಕರ ಇರುವುದಿಲ್ಲ.

ಆ) ಮೇಲ್ಕಂಡ ಸಹಕಾರ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳು ಪಡೆದ ಸಾಲಗಳು ಸಮರ್ಪಕವಾಗಿ ಉಪಯೋಗವಾಗಿ ಬೆಳಗಾಂ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ಮರುಪಾವತಿಯಾಗಿದೆಯೇ?

ಸಕ್ಕರೆ ಕಾರ್ಖಾನೆಗಳು ಸಾಲವನ್ನು ಸಮರ್ಪಕವಾಗಿ ಉಪಯೋಗಿಸಿ ಬೆಳಗಾಂ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಗೆ ಮರುಪಾವತಿಸಿರುತ್ತವೆ.

ಇ) ಸಹಕಾರ ಮತ್ತು ಸಹಕಾರೇತರ ಸಕ್ಕರೆ ಕಾರ್ಖಾನೆಗಳ ಸಾಲ ಮರುಪಾವತಿ ಆಗದೇ ಬೆಳಗಾಂ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಗೆ ಸುಸ್ತಿಯಾಗಿದೆಯೆ? ಹಾಗಿದ್ದಲ್ಲಿ, ವಿವರ ನೀಡುವುದು.

ಘಟಪ್ರಭಾ ಸಹಕಾರ ಸಕ್ಕರೆ ಕಾರ್ಖಾನೆ ನಿ, ಗೋಕಾಕ್ ದುಡಿಯುವ ಬಂಡವಾಳ ಸಾಲವು ಸೆಪ್ಟಂಬರ್–2007 ಕ್ಕೆ ಸುಸ್ತಿಯಾಗಿರುತ್ತದೆ. ಬರಬೇಕಾದ ಸುಸ್ತಿ ಸಾಲದ ಅಸಲು ರೂ.2147.40 ಲಕ್ಷ ಆಗಿರುತ್ತದೆ.

ಈ) ಕಳೆದ ಮೂರು ವರ್ಷಗಳಲ್ಲಿ ಬೆಳಗಾಂ ಜಿಲ್ಲಾ ಸಹಕಾರಿ ಬ್ಯಾಂಕ್ ನಿಯಮಿತ, ಇದರ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಹಕಾರ ಕಾಯ್ದೆ ಕಲಂ 64ರ ವಿಚರಣೆ ಅಥವಾ ಕಲಂ 66ರ ತನಿಖೆ ಇಲ್ಲದೇ ಯಾವುದಾದರೂ ಇಲಾಖಾ ತನಿಖೆ/ವಿಚಾರಣೆ ಮಾಡಲಾಗಿದೆಯೇ? ಹಾಗಿದ್ದಲ್ಲಿ, (ವಿವರ ನೀಡುವುದು)

–ಇಲ್ಲ–

ಉ) ಕಳೆದ ಮೂರು ವರ್ಷಗಳಿಂದ ಬೆಳಗಾಂ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಷ್ಟದಲ್ಲಿದೆಯೇ?

ಕಳೆದ ಮೂರು ವರ್ಷಗಳಿಂದ ಬೆಳಗಾಂ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ನಷ್ಟದಲ್ಲಿರುವುದಿಲ್ಲ.

ಊ) ಹಾಗಿದ್ದಲ್ಲಿ ಅದಕ್ಕೆ ಜವಾಬ್ದಾರರು ಹಾಗೂ ಅವರ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು?

ಅನ್ವಯಿಸುವುದಿಲ್ಲ.

ಸಂಖ್ಯೆ: ಸಿಒ 35 ಸಿಸಿಬಿ 2009

ಸಹಿ/– .
(ಲಕ್ಷ್ಮಣ ಸ. ಸವದಿ)
ಸಹಕಾರ ಸಚಿವರು

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

<u>ಕರ್ನಾಟಕ ವಿಧಾನ ಸಭೆ</u>

410 ಶ್ರಿ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ)

ಅ) ರಾಜ್ಯದಲ್ಲಿ ತಾಲ್ಲೂಕಿಗಿಂತಲೂ ಕಡಿಮೆ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳೆಷ್ಟು? ಹಾಗೂ ಇವುಗಳ ಹೆಸರು ಮತ್ತು ವಿಳಾಸ ನೀಡುವುದು.

ದಿನಾಮಕ 31.03.2008ಕ್ಕೆ ಇದ್ದಂತೆ ರಾಜ್ಯದಲ್ಲಿ ತಾಲ್ಲೂಕಿಗಿಂತಲೂ ಕಡಿಮೆ ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳು 29630 ಇರುತ್ತವೆ.

ಆ) ಇವುಗಳಲ್ಲಿ ನಿಷ್ಕ್ರಿಯ ಸಹಕಾರಿ ಸಂಘಗಳೆಷ್ಟು? ಹಾಗೂ ಕ್ರಿಯಾಶೀಲ ಸಹಕಾರ ಸಂಘಗಳೆಷ್ಟು? ಈ ಸಂಘಗಳು ನಿಷ್ಕ್ರಿಯಗೊಳ್ಳಲು ಕಾರಣಗಳೇನು?

ಇವುಗಳಲ್ಲಿ ನಿಷ್ಕ್ರಿಯ ಸಹಕಾರ ಸಂಘಗಳು 2072 ಇದ್ದು, ಕ್ರಿಯಾಶೀಲ ಸಹಕಾರ ಸಂಘಗಳು 25636 ಇರುತ್ತವೆ.

ಸಂಘಗಳು ನಿಷ್ಕ್ರಿಯಗೊಳ್ಳಲು ಹಲವಾರು ಕಾರಣಗಳಿದ್ದು, ಅವುಗಳಲ್ಲಿ ಮುಖ್ಯವಾದವುಗಳು;